

**ಎಲ್ಲ ರೀತಿಯ ಹೊಂದಾಣಿಕೆ ಇದೆಯೆಂದು ಮದುವೆಯಾದರೂ ದಾಂಪತ್ಯ ನಡೆಯಲು ಅಡ್ಡಿಯಾಗಬಹುದು!**

ಡಾ.ವಿನೋದ ಛೆಬ್ಬಿ

# 119: ಜಗಳದ ಮೂಲ-1

ತಾರುಣ್ಯ ದಾಟಿದಂತೆ ಕಾಣುತ್ತಿದ್ದ ಈ ಗಂಡ ಹೆಂಡತಿ ನನ್ನ ಮುಂದೆ ಬಂದು ಕುಳಿತಿದ್ದರು. ಪರಸ್ಪರ ಮಾತಿಲ್ಲದೆ ಅಸಮಾಧಾನದ ಹೊಗೆಯಾಡುತ್ತಿದ್ದರು. ಒಬ್ಬರು ಮಾತಾಡಲೆಂದು ಇನ್ನೊಬ್ಬರು ಕಾಯುತ್ತಿದ್ದರು.

ಮಾತಾಡಲೆಂದು ಬಂದು ಮಾತಾಡದಿರುವ ದಂಪತಿಗಳನ್ನು ನಾನು ಸಾಕಷ್ಟು ನೋಡಿದ್ದೇನೆ. ಅದಕ್ಕೆ ಕಾರಣಗಳಿವೆ. ಒಂದು, ಒಬ್ಬರು ಬಾಯಿ ತೆರೆದರೆ ಇನ್ನೊಬ್ಬರು ಬಾಯಿಬಡಿದು ತನ್ನದೇ ಸರಿ ಎಂದು ಸಾಧಿಸಲು ಕಾಯುತ್ತಿರುತ್ತಾರೆ. ಇನ್ನೊಂದು, ಸಂಗಾತಿಯ ಬಿಟ್ಟು ಒಬ್ಬರೇ ನನ್ನೊಡನೆ ಹೇಳಿಕೊಳ್ಳಲು ಇಷ್ಟಪಡುತ್ತಾರೆ. ಅಥವಾ ಮತ್ತೇನು ಕಾರಣ ಇರಬಹುದು ಎಂದು ನಿರೀಕ್ಷಿಸುತ್ತಿದ್ದಾಗ ಹೊರಗೆ ದಾಯಿಯೊಡನೆ  ಇದ್ದ ಮಗು ಅಳಲು ಶುರುಮಾಡಿತು. ಹೆಂಡತಿ ಗಂಡನ ಮುಖ ನೋಡಿದಳು. ಗಂಡ ಅರ್ಥಮಾಡಿಕೊಂಡು ಹೊರನಡೆದ. ಈಕೆ ನಿರಾಳವಾದರೂ ಸಾಕಷ್ಟು ಕಹಿಭಾವನೆ ಇಟ್ಟುಕೊಂಡು ಶುರುಮಾಡಿದಳು.

ಈ ದಂಪತಿ – ಇವರನ್ನು ಮಹೇಶ ಹಾಗೂ ಮಮತಾ ಎಂದು ಕರೆಯೋಣವಂತೆ – ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಮದುವೆಯಾಗಿ ಮೂರು ವರ್ಷ ಆಗಿದೆ. ಇವರ ಸಮಸ್ಯೆ ಏನೆಂದರೆ ಇಬ್ಬರ ನಡುವೆ ಸಿಕ್ಕಾಪಟ್ಟೆ ಜಗಳ ಆಗುತ್ತಿದೆ. ಮಹೇಶ ಮಮತಾಳನ್ನು ಸ್ವಲ್ಪವೂ ಅರ್ಥಮಾಡಿಕೊಂಡಿಲ್ಲ. ಯಾಕೆಂದರೆ ಅವನಿಗೆ ಸ್ವಂತಿಕೆಯೇ ಇಲ್ಲ. ಬರೀ ಅಮ್ಮ, ಅಮ್ಮ ಎಂದು ಅನ್ನುತ್ತ ಇರುತ್ತಾನೆ. ಹಾಗೆಂದು ಈಕೆಗೆ ಅತ್ತೆಯನ್ನು ಕಂಡರೆ ಇಷ್ಟವಿಲ್ಲವೆ?  ಮಮತಾ ತಂದೆತಾಯಿಯರನ್ನು ಕಳೆದುಕೊಂಡಿದ್ದಾಳೆ. ಅತ್ತೆಯನ್ನು ತಾಯಿಯಂತೆ ನೋಡಿಕೊಳ್ಳಬೇಕೆಂದು ಇಷ್ಟವಿದೆ. ಆದರೆ ಅತ್ತೆಯ ಸ್ವಭಾವ ವಿಚಿತ್ರ. ಸೊಸೆಯ ಜೊತೆ ಅಷ್ಟಾಗಿ ಮಾತಾಡುವುದಿಲ್ಲ. ಇನ್ನು ಗಂಡನಿಗೆ ಹೆಂಡತಿಯನ್ನು ಹೇಗೆ ಪ್ರೀತಿಸಬೇಕು, ಹೇಗೆ ನೋಡಿಕೊಳ್ಳಬೇಕು ಎನ್ನುವುದು ಸ್ವಲ್ಪವೂ ಗೊತ್ತಿಲ್ಲ. 'ನಿನಗೀಗ ಮದುವೆಯಾಗಿದೆ, ಹೆಂಡತಿ ಬಂದಿದ್ದಾಳೆ. ಅಮ್ಮನನ್ನು ಬಿಟ್ಟು ನನ್ನಕಡೆ ಗಮನ ಕೊಡು ಎಂದು ತಿಳಿಸಿ ಹೇಳಿದರೂ ಈ ಮನುಷ್ಯನಿಗೆ ಅರ್ಥವಾಗುತ್ತಿಲ್ಲ. ನನಗೆ ಕೋಪ ಬರದಿರುತ್ತದೆಯೆ? ಸುಮಾರು ಸಲ ರೇಗಿದ್ದೇನೆ. ಜಗಳ ಆಡಿದ್ದೇನೆ. ಆಗ ಅವನು ಹೊಡೆದಿದ್ದಾನೆ. ನಾನು ಸುಮ್ಮನಿರಲಾದೀತೆ? ನಾನೂ ತಿರುಗಿ ಹೊಡೆದಿದ್ದೇನೆ. ಇಂಥ ಮನುಷ್ಯನೊಡನೆ ಹೇಗಪ್ಪ ಇರುವುದು?' ಇನ್ನೇನು ತಡೆದುಕೊಳ್ಳಲಾರೆ, ಬಿಟ್ಟುಬಿಡೋಣ ಎನ್ನುವಷ್ಟರಲ್ಲಿ ತಾನು ಗರ್ಭಿಣಿ ಆಗಿದ್ದು ಗೊತ್ತಾಗಿದೆ. ಆಗ ಗಂಡ ಚೆನ್ನಾಗಿ ನೋಡಿಕೊಂಡರೂ ಮಗು ಹುಟ್ಟಿದ ನಂತರ ಜಗಳ ಮರುಕಳಿಸಿದೆ.

ಇದೆಲ್ಲ ಹೇಳುವಾಗ ಮಮತಾಳನ್ನು ಗಮನಿಸುತ್ತಿದ್ದೆ. ಆಕೆ ಗಂಡನನ್ನು ವರ್ಣಿಸುವಾಗ ಉಪಯೋಗಿಸುವ ಪದಗಳನ್ನು ಗಮನಿಸುತ್ತಿದ್ದರೆ ಅವನ ಬಗೆಗೆ ತಿರಸ್ಕಾರ ತುಂಬಿರುವುದು ಗೊತ್ತಾಗುತ್ತಿತ್ತು. 'ಮಮತಾ, ನೀವು ಮಾತಾಡುತ್ತಿದ್ದರೆ, ಗಂಡನಿಂದ ತುಂಬಾ ಗಾಸಿಗೊಳಗಾಗಿದ್ದೀರಿ, ಹಾಗಾಗಿ ಅವರ ಬಗೆಗೆ ಗೌರವವಿಲ್ಲ ಎಂದು ಗೊತ್ತಾಗುತ್ತಿದೆ' ಆಕೆ ತಲೆ ಅಲ್ಲಾಡಿಸಿದಳು. 'ಹಾಗಾದರೆ ಈ ದಾಂಪತ್ಯಕ್ಕೆ ನೀವೇಕೆ ಕಟ್ಟುಬೀಳಬೇಕು? ಹೇಗಿದ್ದರೂ ಇಬ್ಬರೂ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದು, ಸಾಕಷ್ಟು ಸಂಪಾದನೆ ಮಾಡುತ್ತಿದ್ದೀರಿ' ಎಂದು ನಿಲ್ಲಿಸಿದೆ. ಆಕೆ ನನ್ನ ವಿಚಾರಧಾರೆಯನ್ನು ಅರ್ಥಮಾಡಿಕೊಂಡಳು. ಹೌದು, ವಿಚ್ಛೇದನದ ಬಗೆಗೆ ಯೋಚಿದ್ದಾಳೆ.  ಇವರಿರುವ ದೇಶದಲ್ಲಿ ಅರ್ಜಿ ಹಾಕಿಕೊಂಡ ಒಂದು ವಾರದಲ್ಲಿ ವಿಚ್ಛೇದನ ಸಿಗುತ್ತದೆ. ಆದರೆ ಇಬ್ಬರಿಗೂ ಮುದ್ದು ಮಗನನ್ನು ಬಿಟ್ಟಿರಲಾಗುವುದಿಲ್ಲ. ಅಲ್ಲದೆ ಮಗನ ಬೆಳವಣಿಗೆಗೆ ತಂದೆ ಬೇಕೇಬೇಕು ಎನ್ನುವುದು ಇವಳಿಗೆ ಅರಿವಿದೆ. ನಂತರ ಇನ್ನೊಂದು ಮದುವೆಯಾಗಬಹುದು ಎಂದರೆ ಇಬ್ಬರಿಗೂ ನಲವತ್ತು ದಾಟಿದೆ. ಆದರೇನಂತೆ ಎನ್ನುವಷ್ಟರಲ್ಲಿ ಮಮತಾ ಇನ್ನೊಂದು ವಿಷಯ ಹೊರಗೆಡುಹಿದಳು.

ಇವರಿಬ್ಬರಿಗೂ ಇದು ಎರಡನೆಯ ಮದುವೆ. ಮುಂಚಿನ ಮದುವೆ ಮುರಿಯಲು ಕಾರಣ ಏನಿರಬಹುದು? ಮಮತಾಳ ಮೊದಲ ಗಂಡ ವಿಕೃತ ಮನಸ್ಸಿನವನಾಗಿದ್ದು ಕ್ರೌರ್ಯದಿಂದ ನಡೆಸಿಕೊಳ್ಳುತ್ತಿದ್ದನಂತೆ. ಹಾಗಾಗಿ ಆಕೆ ಪೋಲೀಸರ ಸಹಾಯ ತೆಗೆದುಕೊಡು ಅವನಿಂದ ಬಿಡುಗಡೆ ಹೊಂದುವ ಪ್ರಸಂಗ ಬಂತಂತೆ. ಆ ನೆನಪೆಲ್ಲ ಆಗಾಗ ಮರುಕಳಿಸಿ, ಮಹೇಶನೇ ಎಷ್ಟೋ ಮಿಗಿಲು ಎನ್ನಿಸುತ್ತದೆ. ಇನ್ನು, ಮಹೇಶನ ಮೊದಲ ಹೆಂಡತಿ ಮದುವೆಯಾದ ಮೂರು ತಿಂಗಳಲ್ಲೇ ಹಣ ದೋಚಿಕೊಂಡು ಪರಾರಿಯಾಗಿ ತನ್ನ ಪ್ರಿಯಕರನನ್ನು ಕೂಡಿಕೊಂಡಳಂತೆ. ಅವಳಿಂದ ಬಿಡುಗಡೆಯಾಗಬೇಕಾದರೆ ಕೋರ್ಟಿಗೆ ಅಲೆಯಬೇಕಾಗಿ ಬಂದಿದೆ. ಹೀಗೆ ಇಬ್ಬರೂ ತಮ್ಮ ಮುಂಚಿನ ಸಂಗಾತಿಗಳಿಂದ ಗಾಸಿಗೊಂಡು ಮದುವೆಯ ಸಹವಾಸವೇ ಬೇಡ ಎಂದು ಸ್ವಲ್ಪ ಕಾಲ ಇದ್ದಾರೆ. ನಂತರ ಒಂಟಿತನ ಸಹಿಸದೆ ಮರುಮದುವೆಗೆ ಮನಸ್ಸುಮಾಡಿದ್ದಾರೆ. ಇಬ್ಬರೂ ಸಮಾನ ದುಃಖಿಗಳೆಂದು ಗೊತ್ತಾಗಿ ಪರಸ್ಪರರಲ್ಲಿ ಅನುಕಂಪ ಹುಟ್ಟಿದ್ದೂ ಮದುವೆಗೆ ಒಪ್ಪಲು ಒಂದು ಮುಖ್ಯ ಕಾರಣ.

ಮಮತಾಳ ಮಾತು ಮುಗಿದಮೇಲೆ ಮಹೇಶನನ್ನು ಒಳಗೆ ಕರೆದೆ. ಅವನು ತನ್ನ ಕತೆ ಹೇಳಿಕೊಂಡ. ಅವನು ಮೂಲತಃ ಹಳ್ಳಿಯವನು. ಅಲ್ಲಿ ಸ್ವಲ್ಪ ಜಮೀನು ಇದೆ – ಅದನ್ನು ತಮ್ಮ ನೋಡಿಕೊಳ್ಳುತ್ತಿದ್ದಾನೆ. ಅಪ್ಪ ಯಾವುದಕ್ಕೂ ಪ್ರಯೋಜನ ಇಲ್ಲದವನು. ಮಹೇಶ ಆರು ವರ್ಷದವನಿದ್ದಾಗ ಅಪ್ಪ ಮನೆಬಿಟ್ಟು ಮಾಯವಾದ. ಹಾಗಾಗಿ ಅಮ್ಮನೇ ಎಲ್ಲ ಜವಾಬ್ದಾರಿ ತೆಗೆದುಕೊಳ್ಳಬೇಕಾಯಿತು. ಮೊದಲೇ ಹಳ್ಳಿಯ ವಾತಾವರಣ. ಗಂಡನಿಲ್ಲದಿರುವ ಹೆಂಡತಿ ಸಾರ್ವಜನಿಕ ಸೊತ್ತಾಗುತ್ತಾಳೆ. ಹಾಗಾಗಿ ಮಹೇಶನ ಅಮ್ಮ ತನ್ನನ್ನು ಕಾಪಾಡಿಕೊಳ್ಳುತ್ತ, ಜಮೀನು ನೋಡಿಕೊಳ್ಳುತ್ತ, ಕೂಲಿ ಮಾಡುತ್ತ, ಇಬ್ಬರು ಮಕ್ಕಳನ್ನು ಬೆಳೆಸಿದ್ದು ಒಂದು ಸಾಹಸ ಗಾಥೆ. ಹಾಗಾಗಿ ಮಹೇಶನಿಗೆ ಅಮ್ಮನ ಬಗೆಗೆ ಅಪಾರ ಗೌರವವಿದೆ. ಅಮ್ಮನನ್ನು ಸುಖವಾಗಿ ನೋಡಿಕೊಳ್ಳುವುದನ್ನು ಬದುಕಿನ ಗುರಿಯಾಗಿ ಇಟ್ಟುಕೊಂಡಿದ್ದಾನೆ. ಹೆಂಡತಿಯು ಅಮ್ಮನನ್ನು ಅಲಕ್ಷಿಸುತ್ತಿರುವುದೇ ಅವನಿಗೆ ಹೆಂಡತಿಯ ಮೇಲೆ ತಿರಸ್ಕಾರ ಹುಟ್ಟುವುದಕ್ಕೆ ಮುಖ್ಯ ಕಾರಣವಾಗಿದೆ.

ಇನ್ನು, ಇವರಿಬ್ಬರೂ ಭೇಟಿಯಾಗಿದ್ದು ಹೇಗೆ ಎಂದು ತಿಳಿದುಕೊಂಡೆ. ಇಬ್ಬರೂ ಐಟಿ ಉದ್ಯೋಗಿಗಳು. ಒಬ್ಬರನ್ನೊಬ್ಬರು ಗೂಗಲಿಸುತ್ತ ಪರಿಚಯ ಆಗಿದ್ದಾರೆ. ಒಂದೇ ದೇಶದ ಬೇರೆ ಬೇರೆ ನಗರಗಳಲ್ಲಿ ಇದ್ದಾರೆ ಎಂದು ಗೊತ್ತಾಗಿ, ತಾಸುಗಟ್ಟಲೆ ಸ್ಕೈಪಿಸುತ್ತ ಮಾತಾಡಿದ್ದಾರೆ. ಆಗಾಗ ಭೇಟಿಯಾಗಿ ವ್ಯವಹರಿಸಿದ್ದಾರೆ. ಒಂದುವಾರ ಒಟ್ಟಿಗೆ ಕಳೆದಿದ್ದಾರೆ. ಹೀಗೆ ಪರಸ್ಪರ ಒಪ್ಪಿ, ಅಪ್ಪಿ, ಮಲಗಿ, ಹತ್ತಿರವಾದ ನಂತರವೇ ಮದುವೆಗೆ ಮುಂದುವರಿದಿದ್ದಾರೆ.

ಇದರರ್ಥ ಏನು? ಇವರ ಜಗಳಗಳ ಮೂಲ ಕಾರಣ ಇವರ ಹೊಂದಾಣಿಕೆಯ ಸಮಸ್ಯೆ ಅಲ್ಲ, ಇನ್ನೇನೋ ಇರಬಹುದು ಎಂದು ಹೊಳೆಯಿತು. ಆದರೆ ಮಹೇಶನ ಅಮ್ಮ ಕಾರಣ ಆಗಿರಲಿಕ್ಕಿಲ್ಲ ಎಂದೆನಿಸಿತು.

ಇವರ ಕಲಹದ ಕಾರಣ ಏನೆಂದು ಮುಂದಿನ ಸಲ ನೋಡೋಣ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.